# ಭಾರೀ ತೂಕದ ಕುಂಬಳಕಾಯಿ

**ವಿಶ್ವ ದಾಖಲೆ ಪಟ್ಟಿ ಸೇರಿರುವ ಈ ಕುಂಬಳಕಾಯಿಯ ತೂಕ ಬರೋಬ್ಬರಿ 826.6 ಕಿಲೋ ಗ್ರಾಮ್!**



ಈ ಚಿತ್ರದಲ್ಲಿರುವ ಕುಂಬಳ ಕಾಯಿಯನ್ನೊಮ್ಮೆ ನೋಡಿ. ಅತ್ಯಂತ ದೊಡ್ಡ ಗಾತ್ರದ ಕುಂಬಳಕಾಯಿ ಎಂಬ ವಿಶ್ವ ದಾಖಲೆಯ ಪಟ್ಟಿ ಸೇರಿರುವ, ಇದರ ತೂಕ ಬರೋಬ್ಬರಿ 1818.5 ಪೌಂಡ್. ಅಂದರೆ ಸುಮಾರು 826.6 ಕಿಲೋ ಗ್ರಾಮ್!

ಕೆನಡಾದ ಕ್ಯೂಬೆಕ್ ಸಮೀಪವಿರುವ ಜಿಮ್ ಮತ್ತು ಕೆಲ್ಸಿಬ್ರೈಸನ್ ಎಂಬ ಅಪ್ಪ, ಮಗಳ ಹೊಲದಲ್ಲಿ ಬೆಳೆದ ಕುಂಬಳ ಕಾಯಿ ಇದು. ಕಳೆದ ವರ್ಷ ಅಕ್ಟೋಬರ್ ತಿಂಗಳಲ್ಲಿ ಪ್ರಿನ್ಸ್ ಎಡ್ವರ್ಡ್ ಪ್ರಾಂತ್ಯದಲ್ಲಿ ನಡೆದ ಕುಂಬಳಕಾಯಿ ಉತ್ಸವ ಸ್ಪರ್ಧೆಗೆ ಇದನ್ನು ಕೊಂಡೊಯ್ದಿದ್ದರು. ತೀವ್ರ ಪೈಪೋಟಿ ಒಡ್ಡುವ ರೀತಿಯಲ್ಲಿ ಭಾರೀ ತೂಕ ಹೊಂದಿರುವ ಕುಂಬಳಕಾಯಿಯ ರಾಶಿಯೇ ಅಲ್ಲಿತ್ತು. ಆದರೆ ಅವುಗಳನ್ನೆಲ್ಲಾ ಹಿಂದಿಕ್ಕಿ ಈ ಭಾರೀ ಗಾತ್ರದ ಕುಂಬಳಕಾಯಿ ಬಹುಮಾನ ಗಳಿಸಿತು.

ಕೆನಡಾ ದೇಶದ ಮಣ್ಣಿನ ಗುಣವೇ ಅಂತಹದು. ನೈಸರ್ಗಿಕ ಅಚ್ಚರಿ ಎಂಬಂತೆ ದೈತ್ಯ ಗಾತ್ರದ ಕುಂಬಳಕಾಯಿ ಬೆಳೆಯಲು ಈ ಮಣ್ಣು ಸೂಕ್ತವಾಗಿದೆ. ಇದುವರೆಗೆ ಕೆನಡಾ ದೇಶದಲ್ಲಿ ಅತೀ ದೊಡ್ಡ ಕುಂಬಳಕಾಯಿ ಬೆಳೆದ ದಾಖಲೆ, ಆಲ್ ಈಟನ್ ಎಂಬ ಹೆಸರಿನ ರೈತನದಾಗಿತ್ತು. ಈತ 655.9 ಕಿಲೋ ಗ್ರಾಮ್ ತೂಕದ ಕುಂಬಳಕಾಯಿ ಬೆಳೆದು 2004 ರಲ್ಲಿ ವಿಶ್ವ ದಾಖಲೆ ಮಾಡಿದ್ದ. ಆದರೆ ಈಗ ಈ ದಾಖಲೆ ಜಿಮ್ ಹಾಗೂ ಕೆಲ್ಸಿಬ್ರೈಸನ್ ಬೆಳೆದ ಕುಂಬಳಕಾಯಿ ಪಾಲಾಗಿದೆ.

■ ವಿದ್ಯಾ ವಿ ಹಾಲಭಾವಿ

